ಕಣ್ಣು ಬಿಟ್ಟಂಗೇ ಇತ್ತು. 'ನಿಂದುಕ್ಕ ನಂಗೆ ಅರ್ಥ ಆಯ್ತದೆ ಮಗ. ಎಲ್ಲಕ್ಕೂ ಕಾಲ ಕೂಡಿ ಬತ್ತದೆ. ಕರಿ ಕೂದ್ಲು ಬೆಳ್ಳಗಾಗ್ಲೆ ಬೇಕು ಕಲಾ' ಎಂದು ಸಮಾಧಾನ ಪಡಿಸುತ್ತಾ ಮನೆ ಕಡೆ ಎಳೆದುಕೊಂಡು ಹೆಜ್ಜೆ ಹಾಕಿದ. ಮನೆ ತಲುಪುವಷ್ಟರಲ್ಲಿ ಚಂದ್ರು ಕಂದು ಬಣ್ಣಕ್ಕೆ ತಿರಿಕ್ಕಂಡಿದ್ದ. ಅವನನ್ನು ನೋಡಿದ ನೀಲವ್ವ ಮತ್ತೆ ಮಲಗಿದ್ದಲ್ಲೇ ಕೊಸರಾಡಿದಳು. ಮಲ್ಲಣ್ಣ 'ಯಾಕಮ್ಮಿ ಏನಾಯ್ತುವ್ವ' ಎನ್ನುತ್ತಾ ಅವಳ ಪಕ್ಕ ತಲೆ ಸವರುತ್ತಾ ಕುಂತನು. ಆದರೆ ಮತ್ತೆ ಜೋರಾಗಿಯೇ ಕೊಸರಿಕೊಂಡ ನೀಲವ್ವನನ್ನು ನೋಡಿ ಚಂದ್ರು 'ತಿಂತೀನಿ ಬುಡವ್ವ' ಎಂದು ಅಡಿಗೆ ಮನೆಯೊಳಗೆ ಹೋಗಿ ಊಟ ಹಾಕಿಕೊಂಡು ಬಂದು ತಿಂದು ಮುಗಿಸಿದ ನಂತರವೇ ನೀಲವ್ವ ಸಮಾಧಾನವಾದದ್ದು. ಹಿಂಗೆ ಮಲ್ಲಣ್ಣನಿಗೆ ಏನೋ ತಟಕ್ಕನೆ ನೆನಪಾದಂತೆ 'ಲೋ ಮಗ, ನಿಮ್ಮವ್ವ ಜಾಸ್ತಿ ಕೊಸರಾಡ್ತವ್ಳೆ ಅಲ್ವಾ. ಹಿಂಗೇನಾರ ಆದ್ರೆ ಕರ್ಕಬನ್ನಿ ಅಂದಿದ್ರು ಡಾಕುಟ್ರು' ಎಂದ. ಚಂದ್ರು ತಟ್ಟೆ ಕೆಳಗಿಳಿಸಿದವನೇ ತನ್ನ ತಲೆ ಮೇಲೆ ತಾನೇ ಹೊಡೆದುಕೊಂಡು, 'ಹೂ ಕನಪ್ಪಾ ನಾಳಿಕ್ಕೇ ಹೋಗನ' ಎಂದು ನೀಲವ್ವನ್ನೇ ನೋಡುತ್ತಾ ತಣಿಗೆಯಲಿ ಕೈ ತೊಳೆದ.

ಬೆಳಗಿನ ಮೊದಲನೇ ಬಸ್ಸು ದೂರದಿಂದಲೇ ತಾನು ಬರುತ್ತಿರುವ ಸುದ್ದಿಯನ್ನು ಸದ್ದು ಮಾಡಿ ತಿಳಿಸಿತು. ಅದಾಗಲೇ ವೀಲ್‌ಚೇರ್ ಸಮೇತ ಮಲ್ಲಣ್ಣ, ಚಂದ್ರು ನೀಲವ್ವನ್ನ ರೆಡಿ ಮಾಡಿಸಿಕೊಂಡು ಊರಿನ ಕ್ರಾಸಿನಲ್ಲಿ ನಿಂತಿದ್ದರು. ಚಂದ್ರುವಿನ ಕೈ ತೊಟ್ಟಿಲಲ್ಲಿ ನೀಲವ್ವ ಮಗುವಾಗಿ ಬಸ್ಸು ಹತ್ತಿದಳು. ಮಲ್ಲಣ್ಣ ವೀಲ್‌ಚೇರ್ ಜೊತೆ ಬಂದ. ಹತ್ತು ನಿಮಿಷವಾದರೂ ಬಸ್ಸು ಹೊರಡಲಿಲ್ಲ. ಜನರೆಲ್ಲ ರೇಗಲು ಆರಂಭಿಸಿದರು. ಕಂಡಕ್ಟರ್ ಹುಬ್ಬೇರಿಸಿ ಹಿಂದೆ ನೋಡುವಂತೆ ಜನರಿಗೆ ಸನ್ನೆ ಮಾಡಿದ. ಸಾಹುಕಾರ್ ಬಸಪ್ಪ ಅಳ್ಳಾಡಿಸ್ಕಂತ ನಡೆದುಕೊಂಡು ಬರುತ್ತಿದ್ದನ್ನು ಕಂಡು ಇಡೀ ಬಸ್ ಗಪ್‌ಚುಪ್ ಆಯಿತು. ಬಸ್ ಹತ್ತಿದ ಸಾಹುಕಾರ ನೀಲವ್ವನ ಕಡೆ ಕೊಂಕು ನೋಟ ಬೀರಿ ಮೀಸೆ ತಿರುವಿದ. ಮಲ್ಲಣ್ಣನಿಗೆ ಅವನೆದೆ ಸೀಳಬೇಕೆನ್ನಿಸಿತು. ಹಲ್ಕಡಿದು ಕುಂತ. ನೀಲವ್ವ ಬಿಟ್ಟ ಕಣ್ಣು ಬಿಟ್ಟಂಗೆ ಇದ್ದಳಾದರೂ ದೇಹ ಒದರಲು ಆರಂಭಿಸುತ್ತಿತ್ತು. ಚಂದ್ರು ಗಟ್ಟಿಯಾಗಿ ತಬ್ಬಿಕೊಂಡು ತಲೆ ನೇವರಿಸಿ ಕಣ್ಣು ಮುಚ್ಚಿಕೊಂಡ. ಬಸ್ಸು ಹೊಗೆ ಬಿಡುತ್ತಾ ಮುಂದೆ ಸಾಗಿತು. ಬಸ್ಸಿನ ಎಲ್ಲಾ ಸೀಟುಗಳಲ್ಲೂ ಗುಸು ಗುಸು ಆರಂಭವಾಗಿತ್ತು. ತನ್ನ ತೊಡೆ ಮೇಲೆ ನೀಲವ್ವನ್ನ ಮಲಗಿಸಿಕೊಂಡ ಚಂದ್ರು ತನ್ನ ಕಣ್ಣುಗಳನ್ನು ಬಿಗಿಯಾಗಿ ಮುಚ್ಚಿದಾಕ್ಷಣ ಅವನ ನೆನಪು ಕಣ್ಬಿಟ್ಟು ಗತ ಹೇಳುತ್ತಾ ಸಾಗಿತು.

ಅದು ಶಿವರಾತ್ರಿಯ ಹಿಂದಿನ ದಿನ. ಕೇರಿಯಲ್ಲಿ ಮಾರಮ್ಮನ ಹಬ್ಬ. ಈ ಹಬ್ಬವೆಂದರೆ ಮಕ್ಕಳಿಗೆ ಸಂಭ್ರಮವೋ ಸಂಭ್ರಮ. ಹೆಣ್ಣು ಮಕ್ಕಳಿಗಂತು ಹೊಸ ಬಟ್ಟೆಯ ಸಂಭ್ರಮದೊಂದಿಗೆ ತಂಬಿಟ್ಟನ್ನು ನೈವೇದ್ಯವಾಗಿ ಮಾರಮ್ಮನಿಗೆ ಅರ್ಪಿಸುವ ಕಾತರ. ನಡುಕೇರಿಯಿಂದ ಮಾರಿ ಗುಡಿಯವರೆಗೆ ಹೆಂಗಸರು ತಲೆ ಮೇಲೆ ತಂಬಿಟ್ಟು ಹೊತ್ತುಕೊಂಡು ಹೋಗುತ್ತಿದ್ದರೆ ಅವರ ಅಕ್ಕ ಪಕ್ಕದಲ್ಲಿ ಸಾಲು ಸಾಲಾಗಿ ಗಂಡಸರು ಹೆಜ್ಜೆ ಹಾಕುತ್ತಾ ನಡೆಯುತ್ತಿದ್ದರು. ಮೆರವಣಿಗೆಯ ಮುಂಭಾಗ ಸಿದ್ದಣ್ಣ ಕೊಂಬು ಊದುತ್ತಿದ್ದರೆ ಕಿಟ್ಟಣ್ಣನ ಪಟಾಲಂ ತಮಟೆ ಬಾರಿಸುತ್ತಾ ಹೆಜ್ಜೆ ಹಾಕುತ್ತಿತ್ತು. ತಂಬಿಟ್ಟಿನ ಮೇಲಿನ ದೀಪದ ಬೆಳಕಲ್ಲಿ ಹೆಂಗಸರ ಮುಖ ಹುಣ್ಣಿಮೆ ಚಂದಿರನಂತೆ ಹೊಳೆಯುತ್ತಿತ್ತು. ದೂರದಿಂದ ನೋಡಿದವರಿಗೆ ನಕ್ಷತ್ರಗಳು ಸಾಲು ಸಾಲಾಗಿ ತಮ್ಮ ಕಡೆ ಆಗಮಿಸುತ್ತಿರುವಂತೆ ಅನಿಸುತ್ತಿತ್ತು. ಮತ್ತೊಂದು ವಿಶೇಷವೆಂದರೆ ಮದುವೆಗೆ ಹೆಣ್ಣು ನೋಡಲು ಬರುವ ಗಂಡನ್ನು ಗಂಡಿನ ಕಡೆಯವರನ್ನು ಈ ದಿನವೇ ಕರೆಸುವುದು. 'ಇವನೇನೆ, ಇಲ್ಲ ಅವನಾ, ಮೂತಿ ನೋಡು, ಆಹಾ ಗೂಳಿಯಂಗವ್ನಲ್ಲೆ, ತಂಬಿಟ್ಟು ತಿನ್ಸಿ ಬಾರಮ್ಮಿ' ಹೀಗೆ ಪಿಸುದನಿಯಲ್ಲಿ ಹೆಣ್ಣಿನ ಗೆಳತಿಯರು ಚುಡಾಯಿಸುವ ಮಾತುಗಳನ್ನು ಆಲಿಸಲೇ ಬಲು ಚಂದ. ಅಂದ ಹಾಗೆ ಈ ತಂಬಿಟ್ಟನ್ನು ಅಕ್ಕಿ